ಸಿ.ಸಿ ನಂಬ್ರಃ 417/2024
ಪಿ.ಡಬ್ಲ್ಯೂ : 1

ದಿನಾಂಕಃ 22-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ ಪಿ ಎಸ್ ವಕೀಲರಿಂದ

1. ಆರೋಪಿಯ ಜೊತೆ ಈ ವ್ಯಹವಾರ ಬಿಟ್ಟು ಈ ವ್ಯವಹಾರದ ಪೂರ್ವದಲ್ಲಾಗಲೀ ನಂತರದಲ್ಲಾಗಲಿ ಯಾವುದೇ ರೀತಿಯಲ್ಲಿ ವ್ಯವಹರಿಸಿರುವುದಿಲ್ಲ. ನನ್ನ ಖಾತೆಯಿಂದ ಆರೋಪಿತನ ಖಾತೆಗೆ, ಆರೋಪಿಯಿಂದ ನನ್ನ ಖಾತೆಗೆ ಬ್ಯಾಂಕಿನ ಮುಖಾಂತರ ಯಾವುದೇ ಹಣ ವರ್ಗಾವಣೆ ಆಗಿರುವುದಿಲ್ಲ. ಆರೋಪಿತ ಶಿವಮೊಗ್ಗ ಜಿಲ್ಲೆಯವರು. ನಮ್ಮ ಮನೆಯಿಂದ 70 ಕಿ.ಮೀ ಅಂತರ ಇರುತ್ತದೆ. ನಾನು ಮತ್ತು ಆರೋಪಿತ ಒಂದೇ ಡಿಪಾರ್ಟ್‌ಮೆಂಟ್ ನಲ್ಲಿ PWD ಕಾಂಟ್ರಾಕ್ಟರ್ ಗಳಾಗಿ ಕೆಲಸ ಮಾಡಿರುತ್ತೇವೆ. ನಾವು ಪಾಲುದಾರಿಕೆಯಲ್ಲಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ಆ ಡಿಪಾರ್ಟ್‌ಮೆಂಟ್ ನಲ್ಲಿ ನಾನು ಬೇರೆ ಕಾಂಟ್ರಾಕ್ಟರ್ ಕೆಲಸ ಮಾಡುತ್ತಿದ್ದೆ. ಆತನು ಬೇರೆ ಕಾಂಟ್ರಕ್ಟರ್ ಕೆಲಸ ಮಾಡುತ್ತಿದ್ದರು.

2. ಉಡುಪಿ ಜಿಲ್ಲೆಯಲ್ಲಿ ಆರೋಪಿತ ಯಾವುದೇ PWD ಕಾಂಟ್ರಾಕ್ಟರ್ ಗುತ್ತಿಗೆ ಆಧಾರದ ಮೇಲೆ ಮಾಡಿರುವುದಿಲ್ಲ. ಅವರು ಶಿವಮೊಗ್ಗದಲ್ಲಿ ಬೇರೆ ಯಾವ ಕಡೆ ಕೆಲಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಆರೋಪಿತ 7-8 ವರ್ಷಗಳಿಂದ ಪರಿಚಯ ಇರುತ್ತಾನೆ. ನಾನು ಇಷ್ಟು ದೊಡ್ಡ ಹಣವನ್ನು ಕೊಡುವ ಅನಿರ್ವಾಯತೆ ಇತ್ತಾ ಎಂದರೆ ಸಾಕ್ಷಿ ಅಂತಹ ಅನಿವಾರ್ಯತೆ ಇರಲಿಲ್ಲ ಎಂದು ನುಡಿಯುತ್ತಾರೆ.

3. ಆತ ಯಾವ ಉದ್ದೇಶಕ್ಕೆ ಹಣ ತೆಗೆದುಕೊಂಡಿರುತ್ತಾನೆ ಎಂದು ಗೊತ್ತಿರುವುದಿಲ್ಲ. ನಮ್ಮ ಮನೆಯಲ್ಲಿ ಹಣವನ್ನು ಕೊಟ್ಟಿರುತ್ತೇನೆ. ಹಣ ಕೊಡುವಾಗ ಆತ ಒಬ್ಬನೇ ಬಂದಿದ್ದ. ಆ ಸಮಯ ನಾನು ಹಾಗೂ ನನ್ನ ಹೆಂಡತಿ ಇದ್ದೇವು. ಹಣ ಕೊಟ್ಟು ಚೆಕ್ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಹಣ ಕೊಟ್ಟಿರುತ್ತೇನೆ, ಚೆಕ್ ತೆಗೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಉದ್ಯೋಗಕ್ಕೆ ಸಂಬಂಧಪಟ್ಟಂತೆ ವಕೀಲರ ಸಂಪರ್ಕ ಮಾಡುವುದಿಲ್ಲ. 10 ಲಕ್ಷ ಕೊಡುವಾಗ ಕರಾರು ಪತ್ರ ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ಆತ ನನ್ನ ಸ್ಣೇಹಿತ ಹಾಗಾಗಿ ಕರಾರು ಪತ್ರ ಮಾಡಿಕೊಂಡಿರುವುದಿಲ್ಲ.

4. ತಮ್ಮ ಖಾತೆಯಿಂದ ಆರೋಪಿತನ ಖಾತೆಗೆ ಹಣ ವರ್ಗಾವಣೆ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಗದಾಗಿ ಹಣ ಕೇಳಿದ್ದ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಹಣ ಕೊಡುವ 1 ವಾರದ ಹಿಂದೆ ನನ್ನ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿಗೆ ಕೊಟ್ಟ ಎಷ್ಟು ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಿರುತ್ತೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2023-24 ರಲ್ಲಿ ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ.

5. ನಾನು ಆದಾಯ ತೆರಿಗೆಯಲ್ಲಿ ಆರೋಪಿಯಿಂದ ಹಣ ಬರಲು ಬಾಕಿ ಇದೆ ಎಂದು ನನ್ನ ಆಡಿಟರ್ ಗೆ ತಿಳಿಸಿಲ್ಲ, ಸಾಕ್ಷಿ ಎಪ್ರೀಲ್‌ನಲ್ಲಿ ಅವರು ಹಣ ಕೊಡುವುದಾಗಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. 2024-25 ರ ಆದಾಯ ತೆರಿಗೆ ಫೈಲ್ ಮಾಡಿರುವುದಿಲ್ಲ. ಅಷ್ಟು ಹಣ ಕೊಟ್ಟ ಬಗ್ಗೆ ಭದ್ರತೆಗಾಗಿ ಏನು ಮಾಡಿಕೊಂಡಿರುವುದಿಲ್ಲ. ಎರಡು ಚೆಕ್ ನಲ್ಲಿ ಆರೋಪಿತ ಸಹಿ ಮಾಡಿ ನನಗೆ ತಂದು ಕೊಟ್ಟಿರುತ್ತಾರೆ. ಎಲ್ಲಿ ಸಹಿ ಮಾಡಿರುತ್ತಾರೆ ಎಂದು ಹೇಳಲು ನನಗೆ ಸಾಧ್ಯ ಇರುವುದಿಲ್ಲ. ನಿ.ಪಿ.1 ಮತ್ತು 2 ರಲ್ಲಿ ಆರೋಪಿತ ಸಹಿ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಆತನೇ ಹಾಕಿರಬಹುದು ಎಂದು ನುಡಿಯುತ್ತಾರೆ. ನಿ.ಪಿ.1 ಮತ್ತು 2 ರಲ್ಲಿರುವ ಮಾಹಿತಿ ಅವರೇ ಬರೆದುಕೊಂಡು ಬಂದಿರುತ್ತಾರೆ. 2 ಚೆಕ್ ನಲ್ಲಿರುವ ಹಸ್ತಾಕ್ಷರ ಆರೋಪಿತನದ್ದು. ಆರೋಪಿತ ಎಲ್ಲಿಬರೆದಿರುತ್ತಾನೆ ಎಂದು ಗೊತ್ತಿರುವುದಿಲ್ಲ.

6. 2 ಚೆಕ್ ಗಳು ಅವರದ್ದೆ ಆಗಿರುವುದರಿಂದ ಆತನೆ ಬರೆದು ತಂದು ಕೊಟ್ಟಿದ್ದಾನೆ ಎಂದು ಹೇಳುತ್ತಿದ್ದೇನೆ. ನಾನು ಡಿ ಸಿ ವಿಲ್ ಇಂಜಿನಿಯರ್ ಇರುತ್ತೇನೆ. ನಿ.ಪಿ. 1 ಎ ಹಾಗೂ ನಗದು ಹಣವನ್ನು ನಮೂದಿಸಿರುವ ಇಂಕಿನ ಶಾಯಿಗಳು ಹಾಗೂ ಪುನೀತ್ ಕುಮಾರ ಹಾಗೂ ದಿನಾಂಕಗಳನ್ನು ಬೇರೆ ಬೇರೆ 2 ಶಾಯಿಗಳಲ್ಲಿ ಬರೆಯಲಾಗಿರುತ್ತದೆ ಎಂದರೆ ಸಾಕ್ಷಿ ನಾಮರ್ಲ್ ಆಗಿರುತ್ತದೆ ಎಂದು ನುಡಿಯುತ್ತಾರೆ. ಅವರ ಸಹಿಯು ಸಹ ಬೇರೆ ಶಾಯಿಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ.

7. ನಿ.ಪಿ.2 ರಲ್ಲಿ ಪುನೀಶ್ ಕುಮಾರ್, ದಿನಾಂಕ ಹಾಗೂ ಮೊತ್ತವನ್ನು ಒಂದು ಶಾಯಿಯಲ್ಲಿ ಬರೆದಿದ್ದು ಸಹಿಯನ್ನು ಇನ್ನೊಂದು ಶಾಯಿಯಲ್ಲಿ ಬರೆದಂತೆ ಕಾಣುತ್ತದೆ ಎಂದರೆ ಸರಿಯಲ್ಲ. 2024 ರಲ್ಲಿ ಆರೋಪಿಗೆ 1 ಲಕ್ಷವನ್ನು ಕೊಟ್ಟು 2 ಖಾಲಿ ಚೆಕ್ ಗಳನ್ನು ಅವರಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅವರು ಹಣವನ್ನು ವಾಪಾಸು ಕೊಟ್ಟಿದ್ದು ಚೆಕ್ ನ್ನು ಕೊಡುತ್ತೇನೆ ಎಂದು ಹೇಳಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಹೆಚ್ಚಿ ನ ಹಣವನ್ನು

ವಸೂಲಿ ಮಾಡುವ ಉದ್ದೇಶದಿಂದ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 2 ಚೆಕ್ ಗಳು ಕೈ ಸಾಲದ ಬಾಕಿಗಾಗಿ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

8. ಖಾಲಿ ಚೆಕ್ ನ್ನು ನನ್ನ ಅನುಕೂಲಕ್ಕೆ ತಕ್ಕಂತೆ ಬರೆದುಕೊಂಡು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ 10 ಲಕ್ಷ ವ್ಯವಹಾರ ನನ್ನ ಹಾಗೂ ಆರೋಪಿತನ ನಡುವೆ ನಡೆದಿಲ್ಲ ಎಂದರೆ ಸರಿಯಲ್ಲ. ಆ ಕಾರಣ ನನ್ನ ಬಳಿ ಯಾವುದೇ ದಾಖಲೆಗಳು ಚೆಕ್ ನ್ನು ಹೊರತು ಪಡಿಸಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಯಾವುದೇ ವ್ಯವಹಾರ ಆಗದ ಕಾರಣದಿಂದ ಪಿರ್ಯಾದಿಯಲ್ಲಾಗಲಿ ಹಾಗೂ ನೋಟಿಸಿನಲ್ಲಾಗಲಿ ನಾನು ಹಣ ಕೊಟ್ಟ ದಿನಾಂಕ ಹಾಗೂ ಉದ್ದೇಶ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ